ವಿಷಯ: ಹುಬ್ಬಳ್ಳಿಯಲ್ಲಿನ ವಾಣಿಜ್ಯ ಸಂಕೀರ್ಣದ ಆದಾಯ.

2530 (3625)

ಶ್ರೀ ಅಶೋಕ ಕಾಟವೆ (ಹುಬ್ಬಳ್ಳಿ ನಗರ): ಮಾನ್ಯ ಪಾರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಮಹಾನಗರದಲ್ಲಿ ಪ್ರಸ್ತುತ ಸಾಲಿನಲ್ಲಿ ಈಜುಗೊಳದ ಹತ್ತಿರ ಕಟ್ಟಿಸಿದ ಭವ್ಯ ವಾಣಿಜ್ಯ ಸಂಕೀರ್ಣದ ಗುತ್ತಿಗೆ ಕೆಲಸವನ್ನು ಯಾರಿಗೆ ವಹಿಸಿಕೊಡಲಾಗಿದೆ. ಇದರ ಶಿಲ್ಪಿ ಯಾರು? ಒಟ್ಟು ಎಷ್ಟು ಮಳಿಗೆಗಳನ್ನು ನಿರ್ಮಿಸಲಾಗಿದೆ ಅಳತೆವಾರು ವಿವರ ನೀಡುವುದು?

ಆ) ಈ ಸಂಕೀರ್ಣಕ್ಕೆ ಒಟ್ಟು ಖರ್ಚು ಮಾಡಿದ ಮೊತ್ತವೆಷ್ಟು? ಹಾಗೂ ಯಾವ ಅನುದಾನದಿಂದ ಖರ್ಚು ಮಾಡಲಾಗಿದೆ?

ಇ) ಇತ್ತೀಚೆಗೆ ಆದ ಹರಾಜಿನಲ್ಲಿ ಯಾವ ಯಾವ ಅಳತೆಯ ಮಳಿಗೆಗಳು ಎಷ್ಟು ಮೊತ್ತಕ್ಕೆ ಹರಾಜು ಆಗಿವೆ? ಅವುಗಳನ್ನು ಯಾವ ಯಾವ ರೀತಿಯಲ್ಲಿ ಹರಾಜಿಸಲಾಗಿದೆ.

ಈ) ಸಂಕೀರ್ಣದಿಂದ ಮಹಾನಗರ ಪಾಲಿಕೆಗೆ ಆದ ಆದಾಯವೆಷ್ಟು?

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಪಾರಾಡಳಿತ ರಾಜ್ಯ ಸಚಿವರು):

ಅ) ಈ ಕೆಲಸವನ್ನು ಮೆ: ರಾವ್ ಕನ್ಸ್‌ಟ್ರಕ್ಷನ್ಸ್, ಬೆಂಗಳೂರು ಇವರಿಗೆ ವಹಿಸಿಕೊಡಲಾಗಿದೆ. ಶ್ರೀ ಶರದ ಕೆಂಭಾವಿ ಇದರ ಶಿಲ್ಪಿ. ಒಟ್ಟು 609 ಮಳಿಗೆಗಳನ್ನು ಕಟ್ಟಬೇಕಾಗಿದ್ದು, ಈಗ 332 ಮಳಿಗೆಗಳು ಸಿದ್ಧವಾಗಿವೆ ಒಟ್ಟು ಮಳಿಗೆಗಳ ಅಳತೆವಾರು ವಿವರಣೆಯನ್ನು ಪುರವಣಿ ಟಿಪ್ಪಣಿಯಲ್ಲಿ ವಿವರಿಸಲಾಗಿದೆ.

ಆ) ಈ ಸಂಕೀರ್ಣದ ಒಟ್ಟು ಅಂದಾಜು ಮೊತ್ತವು ರೂ. 1790 ಲಕ್ಷಗಳು. ಈಗ ಸಧ್ಯ ಕಾಮಗಾರಿಯು ಪ್ರಗತಿಯಲ್ಲಿದ್ದು ಇಲ್ಲಿಯವರೆಗೆ ಖರ್ಚು ರೂ. 1117 ಲಕ್ಷ ಆಗಿದೆ. ಈ ಸಂಕೀರ್ಣಕ್ಕೆ ಹುಡ್ಕೋ ಸಂಸ್ಥೆಯಿಂದ 904 ಲಕ್ಷ ರೂಪಾಯಿ ಸಾಲ ಪಡೆದು ಹಾಗೂ ರೂ. 213 ಲಕ್ಷ ಮಹಾನಗರಪಾಲಿಕೆಯ ಸಾಮಾನ್ಯ ನಿಧಿಯಿಂದ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ.

ಈ) 12 ಮಳಿಗೆಗಳನ್ನು ಟೆಂಡರ್ ಹಾಗೂ ಜಾಹೀರ ಲಿಲಾವು ಮೂಲಕ ಮಾರಾಟ ಮಾಡಲಾದ ಮಳಿಗೆಗಳ ಮಾಹಿತಿ ಕೆಳಗಿನಂತಿದೆ.

ಅನಂ	ಮಳಿಗೆನಂ	ಅಳತೆ	ಒಟ್ಟು ರಕಮು
1.	216	409.59ಚ.ಅ	10,81,318-00
2.	215	-''-	10,15.780-00
3.	214	-''-	9,87,112-00
4.	213	-''-	9,09,290-00
5.	209	-''-	10,85,414-00
6.	210	-''-	9,83,016-00
7.	211	-''-	9,54,345-00
8.	212	-''-	9,58,441-00
9.	236	320.34 ಚ.ಅ	5,44,578-00
10.	237	-''-	5,02,934-00
11.	243	-''-	5,79,816-00
12.	242	-''-	5,63,799-00

ಈ) 12 ಮಳಿಗೆಗಳನ್ನು ಟೆಂಡರ್: ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗಿದೆ. ಇದರಿಂದ ರೂ. 1,01,65,843-00ಗಳು ಸಂದಾಯವಾಗಿದೆ. ಸಂಕೀರ್ಣ ಪೂರ್ತಿ ನಿರ್ಮಿಸಿ ಹಂತವಾಗಿ ಮಳಿಗೆಗಳನ್ನು ಹರಾಜು ಮಾಡಿದ ನಂತರ ಪೂರ್ತಿ ಆದಾಯದ ಬಗ್ಗೆ ಮಾಹಿತಿ ಸಿಗುವುದು.

ವಿಷಯ: ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ ಹಳ್ಳಿಖೇಡ್‌ಗೆ ಸರ್ಕಾರದಿಂದ 2 ಕೋಟಿ ಹಣ ಬಿಡುಗಡೆ.

2534 (3202)

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?